
ಪ್ರಯಾಸಪಟ್ಟರು. ಇಂದು ಕೊರಿಯಾ ದೇಶವು ಕ್ರೈಸ್ತೀಯ ಜೀವಿತದಲ್ಲಿ ಎಷ್ಟು ಮುಂದುವರಿದ ದೇಶವಾಗಿದೆ. ಇದಕ್ಕೆ ಈ ಚಿಕ್ಕ ಒಡಹುಟ್ಟಿದವರಾದ ಹಾಂಗ್‌ಜುನ್ ಮತ್ತು ಚೆಂಗ್ ಲೀಯವರ ಅಳಿಲು ಸೇವೆಯೂ ಒಂದು ಪುಟ್ಟ ಭಾಗವಾಗಿರಬಹುದು. ನಾವು ಹೇಗಿದ್ದೇವೆ? ನಮಗಾಗಿ ಮುರಿಯಲ್ಪಟ್ಟ ಕ್ರಿಸ್ತನ ದೇಹ ಮತ್ತು ನಮಗಾಗಿ ಸುರಿಯಲ್ಪಟ್ಟ ಆತನ ರಕ್ತದ ಪರಿಚಯವೇ ಇಲ್ಲದಿರುವ ಆತ್ಮಗಳಿಗಾಗಿ, ಅವರ ಒಡಹುಟ್ಟಿದವರಾದ ನಾವು ಏನು ಮಾಡುತ್ತಿದ್ದೇವೆ? ನಾವೂ ಕೂಡಾ ಒಬ್ಬೊಬ್ಬ ಹಾಂಗ್‌ಜುನ್ ಮತ್ತು ಚೆಂಗ್ ಲೀ ಆಗಿ ಆತನ ಪರಿಚಯವನ್ನು ಕೊನೇ ಪಕ್ಷ ಒಬ್ಬರಿಗಾದರೂ ಮಾಡಿಕೊಟ್ಟು, ಆತನನ್ನು ಘನ ಪಡಿಸೋಣವೇ?

ಕರ್ತನು ನಿಮ್ಮೆಲ್ಲರೊಂದಿಗಿರಲಿ!

(ಮುಂದುವರಿಯುವುದು...)


# ನೋಹನ ಹಡಗು

● ಸುನಯನ ವಾಲ್ಟರ್ಸ್



ನೋಹನ ಹಡಗಿನ ಘಟನೆಯು ಮೇಲ್ನೋಟಕ್ಕೆ ಸುಂದರವಾದ ಒಂದು ಕಥೆಯಂತೆ ಕಂಡರೂ ಆಳವಾಗಿ ಪರಿಶೀಲಿಸಿದರೆ ಜೀವನದ ಎಷ್ಟೊಂದು ಪಾಠಗಳನ್ನು ಅದರಿಂದ ಕಲಿಯಬಹುದು. ನನಗೆ ತಿಳಿದ ಕೆಲವೊಂದನ್ನು ನಿಮಗೂ ತಿಳಿಸಪಡಿಸುತ್ತೇನೆ.

1. ವೇಳೆಗೆ ಸರಿಯಾಗಿ ಹೊರಡಿರಿ. ಇಲ್ಲವಾದರೆ ಹಡಗು ಹೊರಟುಹೋಗಬಹುದು.
2. ನಾವೆಲ್ಲರೂ ಒಂದೇ ಹಡಗಿನ ಪ್ರಯಾಣಿಕರು. ಅರ್ಥೈಸಿಕೊಳ್ಳಿರಿ.
3. ಮುಂದಾಲೋಚನೆ ಇರಲಿ – ನೋಹನು ಹಡಗು ಕಟ್ಟುವಾಗ ಮಳೆ ಇರಲಿಲ್ಲ.
4. ಆರೋಗ್ಯ ಕಾಪಾಡಿಕೊಂಡು ಸದೃಢರಾಗಿರಿ. ನಿಮ್ಮ 60 ವಯಸ್ಸಿನ ನಂತರವೂ ಮಹತ್ತಾರು ಕಾರ್ಯ ನಿರ್ವಹಿಸಲು ನಿಮಗೆ ಕರೆ ಬರಬಹುದು.
5. ಟೀಕಾಕಾರರ ಮಾತಿಗೆ ಗಮನಕೊಡಬೇಡಿರಿ. ನೀವು ಮಾಡಬೇಕಾದುದನ್ನು ಮಾಡಿ ಮುಗಿಸಿರಿ.
6. ನಿಮ್ಮ ಭವಿಷ್ಯವನ್ನು ಉನ್ನತವಾಗಿ ಕಟ್ಟಿರಿ.
7. ಸಾಧ್ಯವಾದಷ್ಟೂ ಜೊತೆಗೆ ಪಯಣಿಸಿರಿ.
8. ವೇಗವು ಯಾವಾಗಲೂ ಅನುಕೂಲಕರವೆಂದೇನಿಲ್ಲ. ಹಡಗಿನಲ್ಲಿ ಚಿರತೆಗಳೊಂದಿಗೆ ಬಸವನ ಹುಳುಗಳು ಕೂಡಾ ಇದ್ದವು.
9. ಗಮನಿಸಿ! ನೋಹನ ಹಡಗು ಹವ್ಯಾಸಿಗಳಿಂದ ಕಟ್ಟಲ್ಪಟ್ಟಿತು. ಆದರೆ "ಟೈಟಾನಿಕ್" ಹಡಗು ಕಟ್ಟಿದವರು ಶ್ರೇಷ್ಠ ವೃತ್ತಿ ನಿರತರಾಗಿದ್ದರು.
10. ನಿಮಗೆ ಸಹಿಸಲಾರದ ಒತ್ತಡ ಉಂಟಾದಾಗ ಸ್ವಲ್ಪ ತೇಲಾಡಿರಿ.
11. ಮಳೆ ಇರಲಿ, ಬಿರುಗಾಳಿ ಇರಲಿ – ದೇವರ ನಿಕಟತೆಯಲ್ಲಿದ್ದರೆ ಸಪ್ತವರ್ಣರಂಜಿತ ಮುಗಿಬಿಲ್ಲು ನಿಮಗಾಗಿ ಕಾಯುತ್ತಿರುವುದು.




# ಹವ್ಯಾಸ

**ದೊ**ಡ್ಡ ವ್ಯಾಪಾರಿ ಮಳಿಗೆಯಲ್ಲಿ ಕಾವಲುಗಾರನಾದ ಪಾಸ್ತು ತನ್ನ ನೆಲಮಾಳಿಗೆಯಲ್ಲಿ ಸ್ವಲ್ಪ ಸಂಪತ್ತನ್ನು ಸಂಗ್ರಹಿಸಿಟ್ಟಿದ್ದಾನೆ ಎಂಬ ವಿಚಾರವು ಅವನ ಮಾಲಕನ ಕಿವಿಗೆ ಬಿತ್ತು. ಅದನ್ನು ಪರೀಕ್ಷಿಸುವ ಸಲುವಾಗಿ ಮಾಲಕನು ಆತನ ಕೋಣೆಗೆ ಹೋದಾಗ ನೆಲಕ್ಕೆ ಹಾಸುವ ರತ್ನಗಂಬಳಿ, ಕೊಳಲು ಮತ್ತು ಸಂಪ್ರಾದಾಯಿಕ ಉಡುಗೆ ಇವುಗಳನ್ನು ಹೊರತು ಪಡಿಸಿ ಆ ಕೋಣೆಯಲ್ಲಿ ಏನೂ ಇರಲಿಲ್ಲ. "ಇದು ನನ್ನ ಸಂಪತ್ತಲ್ಲ" ಎಂಬುದಾಗಿ ಮಾಲಕನು ಹೇಳಿದಾಗ ಪಾಸ್ತು ಹೇಳಿದ್ದು "ಆದರೆ ಇದು ನನ್ನ ಸಂಪತ್ತು"

ಕೆಲವೊಮ್ಮೆ ಉದ್ವೇಗ ಮತ್ತು ಒತ್ತಡಕ್ಕೆ ಒಳಗಾದಾಗ ನಾನು ಇಲ್ಲಿಗೆ ಬಂದು ಸಂಪ್ರಾದಾಯಿಕ ಉಡುಗೆಗಳನ್ನು ಹಾಕಿ ರತ್ನಗಂಬಳಿಯ ಮೇಲಿ ಕುಳಿತು ಕೊಳಲನ್ನು ನುಡಿಸುತ್ತೇನೆ. ಇದು ನಾನು ಪ್ರೀತಿಸುವ ಸಂಗೀತಗಳಿಂದ ಕೂಡಿದ ನನ್ನ ಬಾಲ್ಯವನ್ನು ನೆನಪಿಗೆ ತರುತ್ತದೆ. ಗಿಡಮರ, ಪಕ್ಷಿ ವಿವಿಧ ಹೂವುಗಳು ಮತ್ತು ಅವುಗಳ ಸುಗಂಧ, ಇವುಗಳ ಕನಸನ್ನು ನಾನು ಈ ಮೂಲಕ ಕಾಣುತ್ತೇನೆ.

ಈ ಒಂದು ಹವ್ಯಾಸದಿಂದ ಆತನಿಗೆ ಶಾಂತಿ, ಹೊಸತನ ಚೈತನ್ಯ ಮತ್ತು ವಿಶ್ರಾಂತಿ ಸಿಕ್ಕುತ್ತಿತ್ತು!

**ಸೂಚನೆಗಳು**

ಬಿಡುವಿನ ಸಮಯದಲ್ಲಿ ಯಾವುದಾದರೂ ಹವ್ಯಾಸವನ್ನು ಹೊಂದಿರುವುದು ಉತ್ತಮ. ಅದು ವಾದ್ಯ ಸಂಗೀತ ಕಲಿಯುವುದು, ಚಿತ್ರಕಲೆ ಅಥವಾ ಸರಳವಾಗಿ ಸೂಜಿಯಿಂದ ಹೊಲಿಯುವುದೂ ಇರಬಹುದು. ಒತ್ತಡ ಅಥವಾ ಪ್ರಯಾಸದ ಸಮಯದಲ್ಲಿ ಇಂತಹ ಹವ್ಯಾಸಗಳು ಮನಸ್ಸಿಗೆ ವಿಶ್ರಾಂತಿಯನ್ನು ಮತ್ತು ಹೊಸ ಚೈತನ್ಯ ಹಾಗೂ ನೆಮ್ಮದಿಯನ್ನು ನೀಡುತ್ತವೆ. ನಮ್ಮಲ್ಲಿರುವ ಕೌಶಲ್ಯವನ್ನು ವ್ಯಕ್ತಪಡಿಸುವುದರಿಂದ, ನಮಗೆ ಸಾಧನೆಯ ತೃಪ್ತಿ ದೊರೆಯುತ್ತದೆ. ಇದು ಹೆಚ್ಚಿನ ಸಂತೋಷ ಮತ್ತು ಆನಂದವನ್ನು ನೀಡುತ್ತದೆ.

**ನೀತಿ**

ಪ್ರೇರಣೆಯು ನೆಲೆಸಿದಲ್ಲಿ ನೆಮ್ಮದಿ ಇರುತ್ತದೆ.

**ಚಿಂತನೆಗಳು**

1. ಹೂಳಲ್ಪಟ್ಟ ಬೀಜವು ಬೆಳೆಯಬಲ್ಲದು, ಆದರೆ ಹೂಳಲ್ಪಟ್ಟ ಕೌಶಲ್ಯಗಳು ಬೆಳೆಯಲು ಸಾಧ್ಯವಿಲ್ಲ.
2. ಆಸಕ್ತಿಯ ಮೂಲಕ ಕೌಶಲ್ಯವನ್ನು ಪಡೆಯಬಹುದು. ಮನುಷ್ಯನು ಏನು ಪಡೆಯುತ್ತಾನೋ ಅದರ ಮೇಲೆ ಅವನ ಉತ್ತಮತೆಯು ರೂಪುಗೊಳ್ಳುತ್ತದೆ.
3. ಅಭ್ಯಾಸದಿಂದ ನಮ್ಮಲ್ಲಿ ಕೌಶ್ಯಲ್ಯಗಳು ಬೆಳೆಯುತ್ತದೆ. ಹಾಗೂ ಕೌಶ್ಯಲವು ಅಭ್ಯಾಸವನ್ನು ಉತ್ತೇಜಿಸುತ್ತದೆ.

**ಪ್ರಾರ್ಥನೆ**

ನನ್ನ ಬಿಡುವಿನ ಸಮಯದಲ್ಲಿ ಮಾಡುವ ಕೆಲಸಗಳಿಗೆ ಪ್ರೇರಣೆಯನ್ನು ನೀಡು ಓ ದೇವಾ! ಇದು ದಿನನಿತ್ಯದ ಒತ್ತಡದಿಂದ ಮನಕ್ಕೆ ವಿಶ್ರಾಂತಿಯನ್ನು ನೀಡುತ್ತದೆ. ಈ ಹವ್ಯಾಸಗಳು ನನ್ನನ್ನು ಅಭಿವೃದ್ಧಿ ಪಡಿಸಲಿ. ಮಾತ್ರವಲ್ಲದೆ ನನ್ನ ಬಿಡುವಿನ ಸಮಯವನ್ನು ಅರ್ಥಪೂರ್ಣವಾಗಿ ಕಳೆಯುವಂತಾಗಲಿ. ಸಹಾಯವನ್ನು ಬಯಸುವ ಜನರಿಗೆ ಸಹಾಯಿಸಲು ನನ್ನ ಬಿಡುವಿನ ಸಮಯವನ್ನು ವಿನಿಯೋಗಿಸಲು ಪ್ರೇರಣೆಯನ್ನು ನೀಡು. ನಿನ್ನ ಪ್ರೀತಿಯ ಆಧಾರದಲ್ಲಿ ಇದನ್ನು ಬೇಡುತ್ತಿದ್ದೇನೆ..... ಆಮೆನ್ ■